ಆರ್‌ಬಿಐ/2004/259

ಡಿಬಿಒಡಿ. ಎಎಂಎಲ್.ಬಿಸಿ.ಸಂಖ್ಯೆ.101/14.01.001/2003–04 ಜೂನ್ 21, 2004

ಎಲ್ಲ ವಾಣಿಜ್ಯ ಬ್ಯಾಂಕುಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
(ಆರ್‌ಆರ್‌ಬಿಗಳನ್ನು ಹೊರತುಪಡಿಸಿ)

ಮಾನ್ಯರೇ,

**ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ (ಕೆವೈಸಿ) ಸೂತ್ರಗಳು–ಹಾಲಿ ಇರುವ ಖಾತೆಗಳು ಕುರಿತ ಮಾರ್ಗಸೂಚಿಗಳು**

1. ಮೇಲಿನ ವಿಷಯದ ಬಗ್ಗೆ ಆಗಸ್ಟ್ 16, 2002ನೇ ದಿನಾಂಕದ ನಮ್ಮ ಸುತ್ತೋಲೆ ಡಿಬಿಒಡಿ ಸಂಖ್ಯೆ.ಎಎಂಎಲ್.ಬಿಸಿ.18/14.01.001/2002–03 ನ್ನು ದಯವಿಟ್ಟು ನೋಡಿ. ಮೇಲಿನ ಸುತ್ತೋಲೆಯ 3ನೇ ಪ್ಯಾರಾದಲ್ಲಿ ಹಾಲಿ ಇರುವ ಖಾತೆಗಳ ಸಂಬಂಧದಲ್ಲಿ ಯಾವುದೇ ಲೋಪ ಉಂಟಾದ ಸಂದರ್ಭದಲ್ಲಿ ಕೆವೈಸಿ ಕಾರ್ಯವಿಧಾನಗಳನ್ನು ಆದಷ್ಟು ಬೇಗನೇ ಪೂರೈಸಿ ಎಂದು ಸೂಚಿಸಲಾಗಿತ್ತು. ಅಲ್ಲದೆ, ಅನುಕ್ರಮವಾಗಿ ನವೆಂಬರ್ 24 ಮತ್ತು ಡಿಸೆಂಬರ್ 16, 2003ರ ನಮ್ಮ ಸುತ್ತೋಲೆಗಳು ಡಿಬಿಒಡಿ.ಎಎಂಎಲ್.ಸಂಖ್ಯೆ.47/14.01.001/2003–04 ಮತ್ತು 129/14.01.001/2003–04 ಇವುಗಳ ಪ್ರಕಾರ ಅವುಗಳಲ್ಲಿ ಗೊತ್ತುಪಡಿಸಿರುವ ವೇಳಾಪಟ್ಟಿಯಂತೆ ಹಾಲಿ ಇರುವ ಖಾತೆಗಳ ಸಂಬಂಧದಲ್ಲಿ ಕೆವೈಸಿ ವಿಧಾನಗಳನ್ನು ಪೂರ್ಣಗೊಳಿಸಲು ಬ್ಯಾಂಕುಗಳಿಗೆ ಸಲಹೆ ನೀಡಲಾಗಿತ್ತು.

2. ಈ ಸಂಬಂಧದಲ್ಲಿ ದಿನಾಂಕ ಮೇ 18, 2004ರ ಗೌರ್ನರ್‌ರವರ ಪತ್ರ ಸಂಖ್ಯೆ ಎಂಪಿಡಿ.ಬಿಸಿ.249/07.01.279/2003–04 ರೊಂದಿಗೆ ನಿಮಗೆ ರವಾನಿಸಲಾಗಿರುವ 2004–05ನೇ ಸಾಲಿನ ವಾರ್ಷಿಕ ನೀತಿ ತಃಖ್ತೆಯ 126 ನೇ ಸಂಖ್ಯೆಯ ಪ್ಯಾರಾವನ್ನು ದಯವಿಟ್ಟು ನೋಡಿ (ಪ್ಯಾರಾದ ಪ್ರತಿಯನ್ನು ಲಗತ್ತಿಸಿದೆ).

3. ನಿಮ್ಮ ಮಂಡಳಿಯೊಂದಿಗೆ ಸಮಾಲೋಚಿಸಿ ನೀವು ಈಗಾಗಲೇ ಕೆವೈಸಿ ನೀತಿಯನ್ನು ರೂಪಿಸಿದ್ದೀರೆಂದು ನಾವು ಭಾವಿಸಿದ್ದೇವೆ. ಎಲ್ಲ ಹೊಸ ಖಾತೆಗಳನ್ನು ತೆರೆಯುವುದಕ್ಕೆ ಆ ನೀತಿಯನ್ನು ಪಾಲಿಸತಕ್ಕದ್ದು. ಆದರೆ, ಹಾಲಿ ಇರುವ ಸಣ್ಣ ಖಾತೆ ಧಾರಕರಿಗೆ ಅನಾನುಕೂಲವಾಗದಂತೆ ಮತ್ತು ಕೆವೈಸಿ ಕಾರ್ಯವಿಧಾನವನ್ನು ಸಕಾಲದಲ್ಲಿ ಪೂರ್ಣಗೊಳಿಸುವಂತೆ ನೋಡಿಕೊಳ್ಳುವ ದೃಷ್ಟಿಯಿಂದ, ಬ್ಯಾಂಕುಗಳು ಕೆವೈಸಿ ಕಾರ್ಯವಿಧಾನಗಳ ಅರ್ಜಿಗಳನ್ನು, ಮಾರ್ಚ್ 31, 2003ಕ್ಕೆ ಕೊನೆಗೊಳ್ಳುವ ಹಣಕಾಸು ವರ್ಷದ ಜಮೆ ಮತ್ತು ಖರ್ಚು ಮೊತ್ತವು 10 ಲಕ್ಷ ರೂಪಾಯಿಗಿಂತ ಹೆಚ್ಚಾಗಿರುವಲ್ಲಿ ಅಥವಾ ಅಸಮಾನ್ಯ ವ್ಯವಹಾರಗಳ ಬಗ್ಗೆ ಸಂಶಯ ತಳೆದಿರುವಲ್ಲಿ, ಹಾಲಿ ಇರುವ ಖಾತೆಗಳಿಗೆ ಸೀಮಿತಗೊಳಿಸಬಹುದು. ಈ ಪ್ರಕ್ರಿಯೆಯನ್ನು ಡಿಸೆಂಬರ್ 31, 2004ರ ವೇಳೆಗೆ ಪೂರ್ಣಗೊಳಿಸತಕ್ಕದ್ದು.

4. ಆದರೆ, ಬ್ಯಾಂಕುಗಳ, ಟ್ರಸ್ಟುಗಳ, ಕಂಪನಿಗಳ/ಫರ್ಮ್‌ಗಳ, ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಮತ್ತು ಇತರ ಸಂಸ್ಥೆಗಳ ಹಾಲಿ ಇರುವ ಎಲ್ಲ ಖಾತೆಗಳಿಗೆ ಅಥವಾ ಖಾತೆಗಳನ್ನು ಕಡ್ಡಾಯ ಆದೇಶದ ಅಥವಾ ಅಧಿಕಾರ ಪತ್ರದ ಮೂಲಕ ತೆರೆಯಲಾಗಿದ್ದರೆ ಅಂಥ ಖಾತೆಗಳಿಗೆ ಕೆವೈಸಿ ವಿಧಾನಗಳನ್ನು ಅನ್ವಯಿಸುವಂತೆ ನೋಡಿಕೊಳ್ಳತಕ್ಕದ್ದು. ಕೆವೈಸಿ ಕಾರ್ಯವಿಧಾನಗಳನ್ನು ಸ್ಥಳೀಯ ಪರಿಸ್ಥಿತಿಗಳಿಗೆ ಹೊಂದಿಕೆಯಾಗುವಂತೆ ಸ್ಥಿರವಾಗಿ ಅನ್ವಯಿಸತಕ್ಕದ್ದು.

ತಮ್ಮ ವಿಶ್ವಾಸಿ,

(ಪ್ರಶಾಂತ್ ಶರಣ್)
ಮುಖ್ಯ ಪ್ರಧಾನ ವ್ಯವಸ್ಥಾಪಕರು.

**2004–05ನೇ ಸಾಲಿನ ವಾರ್ಷಿಕ ನೀತಿ ತಃಖ್ತೆಯ ಉಧೃತ ಭಾಗ**

**(1) ಕೆವೈಸಿ ಮತ್ತು ಗ್ರಾಹಕ ಸಂಬಂಧದ ಖಾಸಗಿತನ**

126. ಇತ್ತೀಚಿನ ವರ್ಷಗಳಲ್ಲಿ, ಅಕ್ರಮ ಹಣ ಸಕ್ರಮೀಕರಣ ತುಂಬಾ ಪ್ರಾಮುಖ್ಯತೆ ಪಡೆದುಕೊಂಡಿದೆ. ಈ ನಿಟ್ಟಿನಲ್ಲಿ, ಬ್ಯಾಂಕುಗಳು ನಿಮ್ಮ ಗ್ರಾಹಕರ ಬಗ್ಗೆ ತಿಳಿಯಿರಿ ಎಂಬ ತತ್ವವನ್ನು ಅಳವಡಿಸಿಕೊಳ್ಳುವುದು, ಅಕ್ರಮ ಹಣ ಸಕ್ರಮೀಕರಣ ಮತ್ತು ಭಯೋತ್ಪಾದನೆಗೆ ಹಣಕಾಸು ನೆರವು ನೀಡುವುದರ ವಿರುದ್ಧ ಹೋರಾಡುವುದಕ್ಕಾಗಿ ಇಟ್ಟ ಮತ್ತೊಂದು ಹೆಜ್ಜೆಯಾಗಿದೆ. 2002ರ ಆಗಸ್ಟ್‌ನಲ್ಲಿ ಸೂಕ್ತ ದಾಖಲೆಗಳ ಮೂಲಕ ಗುರುತನ್ನು ಸ್ಥಿರಪಡಿಸುವುದಕ್ಕೆ ಸೂಕ್ತ ಕೆವೈಸಿ ಕಾರ್ಯವಿಧಾನವನ್ನು ಪೂರ್ಣಗೊಳಿಸುವಂತೆ ಹಾಗೂ ಅಂಥ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳುವುದರಿಂದ ಬ್ಯಾಂಕಿಂಗ್ ಸೇವೆಗಳನ್ನು ಪಡೆಯುವ ಅವಕಾಶವನ್ನು ಜನಸಾಮಾನ್ಯರಿಗೆ ವಂಚಿಸುವುದಕ್ಕೆ ಅವಕಾಶವಾಗದಂತೆ ನೋಡಿಕೊಳ್ಳಬೇಕೆಂದು ಬ್ಯಾಂಕುಗಳಿಗೆ ಸಲಹೆ ಮಾಡಲಾಗಿತ್ತು. ಅಲ್ಲದೆ, 2002ರ ಡಿಸೆಂಬರ್‌ನಲ್ಲಿ, ಕೆವೈಸಿ ಸೂತ್ರಗಳನ್ನು ಪಾಲಿಸುವುದಕ್ಕಾಗಿ 2002ರ ಆಗಸ್ಟ್‌ಗೆ ಮುಂಚೆ ತೆರೆಯಲಾಗಿದ್ದ ಖಾತೆಗಳನ್ನು ಪುನರ್ ಪರಿಶೀಲಿಸುವಂತೆ ಮತ್ತು ಎಲ್ಲ ಖಾತೆಗಳ ಸಂಬಂಧದಲ್ಲಿ 2004ರ ಡಿಸೆಂಬರ್ ವೇಳೆಗೆ ಈ ಕೆಲಸವನ್ನು ಹಂತಹಂತವಾಗಿ ಪೂರ್ಣಗೊಳಿಸಲು ಅವಶ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಬ್ಯಾಂಕುಗಳಿಗೆ ಸಲಹೆ ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ:

- ಬ್ಯಾಂಕುಗಳು, ಅವುಗಳ ಮಂಡಳಿಗಳು ಅಳವಡಿಸಿಕೊಂಡಿರುವಂಥ ಕೆವೈಸಿ ನೀತಿಯನ್ನು ಹೊಸ ಖಾತೆಗಳನ್ನು ತೆರೆಯುವುದಕ್ಕೆ ಸಂಬಂಧಿಸಿದಂತೆ ಪೂರ್ಣವಾಗಿ ಪಾಲಿಸಬೇಕೆಂದು, ಜಮೆ/ಖರ್ಚು ವ್ಯವಹಾರಗಳ ಮೊತ್ತ 10 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿರುವಂತಹ ಅಥವಾ ಬ್ಯಾಂಕುಗಳು ಯಾವುದೇ ಅಸಾಮಾನ್ಯ ವ್ಯವಹಾರಗಳ ಬಗ್ಗೆ ಸಂಶಯ ತಳೆದಿರುವಂತಹ ಪ್ರಕರಣಗಳಲ್ಲಿ ಅದರ ಅನ್ವಯತೆಯನ್ನು ಹಾಲಿ ಇರುವ ಖಾತೆಗಳಿಗೆ ಮಿತಿಗೊಳಿಸಬಹುದೆಂದು,

- ಬ್ಯಾಂಕುಗಳು, ಟ್ರಸ್ಟುಗಳಿಗೆ, ಮಧ್ಯವರ್ತಿ ಸಂಸ್ಥೆಗಳಿಗೆ ಸೇರಿದ ಎಲ್ಲ ಖಾತೆಗಳಲ್ಲಿ ಅಥವಾ ಕಡ್ಡಾಯ ಆದೇಶದ ಅಥವಾ ಅಧಿಕಾರ ಪತ್ರದ ಮೂಲಕ ಖಾತೆಗಳನ್ನು ನಿರ್ವಹಿಸುತ್ತಿರುವಲ್ಲಿ ಕೆವೈಸಿಯನ್ನು ನಡೆಸತಕ್ಕದ್ದು. ಕೆವೈಸಿ ಕಾರ್ಯವಿಧಾನವನ್ನು ಸ್ಥಳೀಯ ಸನ್ನಿವೇಶಗಳಿಗೆ ಹೊಂದಿಕೆಯಾಗುವಂತೆ ಸ್ಥಿರವಾಗಿ ಅನ್ವಯಿಸತಕ್ಕದ್ದು ಹಾಗೂ 2004ರ ಡಿಸೆಂಬರ್ ವೇಳೆಗೆ ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು,

– ಎಂದು ಸೂಚಿಸಲಾಗಿದೆ.